# 8. ಶುಂಪೀಟರ್ ಮತ್ತು ಸೃಜನಶೀಲ ವಿನಾಶ ತತ್ವ

ಶುಂಪೀಟರ್‌ರವರು ತಮ್ಮ ಥಿಯರಿ ಆಫ್ ಎಕಾನಾಮಿಕ್ ಡೆವಲಪ್ಮೆಂಟ್ (1912) ನಲ್ಲಿ, "ಆವಿಷ್ಕಾರವು ಬಂಡವಾಳಶಾಹಿ ಸಮಾಜದ ಆರ್ಥಿಕ ಇತಿಹಾಸದಲ್ಲಿ ಒಂದು ಮಹೋನ್ನತ ಸಂಗತಿಯಾಗಿದೆ" ಎಂದಿದ್ದಾರೆ. ಅವರು ಆರ್ಥಿಕತೆ ಮತ್ತು ಸಮಾಜದಲ್ಲಿ "ಹೊಸ ಸಂಯೋಜನೆಗಳನ್ನು ಕೈಗೊಳ್ಳುವುದು" ಆವಿಷ್ಕಾರವಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅಂದರೆ ಅವರ ದೃಷ್ಟಿಯಲ್ಲಿ ಹೊಸ ವಸ್ತುಗಳ ಉತ್ಪಾದನೆ, ವಸ್ತುಗಳ ಗುಣಮಟ್ಟ ಮತ್ತು ಉತ್ಪಾದನಾ ವಿಧಾನಗಳನ್ನು ಸುಧಾರಿಸುವುದು, ಹೊಸ ಮಾರುಕಟ್ಟೆಗಳ ಶೋಧನೆ, ಸಂಸ್ಥೆಗಳು ಮತ್ತು ಕೈಗಾರಿಕೆಗಳನ್ನು ಸಂಪೂರ್ಣವಾಗಿ ಮರು ಸಂಘಟಿಸುವುದು ಹಾಗೂ ಹೊಸ ಕಚ್ಚಾ ಮೂಲಗಳನ್ನು ಗುರುತಿಸುವುದು ಆವಿಷ್ಕಾರಗಳಾಗಿವೆ. ಆಡಂ ಸ್ಮಿತ್ ಮತ್ತು ಕಾರ್ಲ್ ಮಾರ್ಕ್ಸ್‌ರಂತೆ  ಶುಂಪೀಟರ್‌ರವರು ಕೂಡ ಬಂಡವಾಳಶಾಹಿಯನ್ನು ಆರ್ಥಿಕ, ಸಾಮಾಜಿಕ, ರಾಜಕೀಯ, ನ್ಯಾಯಾಂಗ, ಧಾರ್ಮಿಕ ಮತ್ತು ಕಲಾತ್ಮಕ ಎಂಬ ಜೀವನದ ಎಲ್ಲಾ ಕ್ಷೇತ್ರಗಳನ್ನು ಒಳಗೊಂಡಿರುವ "ಸಾಂಸ್ಕೃತಿಕ ವಿದ್ಯಮಾನ" ಎಂದು ಭಾವಿಸಿದ್ದರು. ಅವರು ಮಾರ್ಕ್ಸ್‌ನಿಂದ ಎರವಲು ಪಡೆದ 'ಚಲನೆಯ ನಿಯಮ' ಎಂಬ ಪದವು ಆವಿಷ್ಕಾರ ಎಂಬ ಪದಕ್ಕೆ ಕಾರಣವಾಗಿದೆ. ಶುಂಪೀಟರ್‌ರವರ ಮರಣಾ ನಂತರ ಪ್ರಕಟವಾದ ಅವರ ಹಿಸ್ಟರಿ ಆಫ್ ಎಕಾನಾಮಿಕ್ಸ್  (1954) ಎಂಬ ಕೃತಿಯು ಶುಂಪೀಟರ್ ಆಧುನಿಕ ಅರ್ಥಶಾಸ್ತ್ರಜ್ಞರ ಗುಂಪಿಗೆ ಸೇರಿದ ಒಬ್ಬ ಮೇಧಾವಿ ಅರ್ಥಶಾಸ್ತ್ರಜ್ಞರಾಗಿದ್ದಾರೆ ಎಂದು ಉಲ್ಲೇಖಿಸಲು ಅರ್ಹವಾಗಿದೆ. ಅದು ಈ ವಿಷಯದ ಪ್ರಾರಂಭದಿಂದ ಇಪ್ಪತ್ತನೇ ಶತಮಾನದ ಮಧ್ಯಭಾಗದವರೆಗೂ  ಆರ್ಥಿಕ ವಿಶ್ಲೇಷಣೆಯ ಇತಿಹಾಸದಲ್ಲಿ ಆಸಕ್ತಿ ಹೊಂದಿರುವ ಪ್ರತಿಯೊಬ್ಬರಿಗೂ ಅತ್ಯಮೂಲ್ಯ ನಿಧಿಯಾಗಿದೆ. .

ಶುಂಪೀಟರ್‌ರವರು ಬಂಡವಾಳಶಾಹಿಯು ಹೇಗೆ ತನ್ನ ಸ್ವಂತ ಇಚ್ಛೆಯಿಂದ ನಿರಂತರವಾಗಿ ಮುಂದುವರಿಯುವ ಶಕ್ತಿಯನ್ನು ಸೃಷ್ಟಿಸಿಕೊಳ್ಳುತ್ತದೆ? ಎಂಬ ಪ್ರಶ್ನೆಯನ್ನು ಎತ್ತುವುದರೊಂದಿಗೆ, ಅದರ ಆಂತರಿಕ ತರ್ಕವೇನು ಮತ್ತು ಅದು ಸ್ವಯಂ-ಪರಿವರ್ತನೆಯ ಪ್ರಕ್ರಿಯೆಗೆ ಒಳಗಾಗಲು

ಅಧಿಕಾವಧಿಗೆ ಏಕೆ ಬದ್ಧವಾಗಿದೆ? ಅದರ ಚಡಪಡಿಕೆಗೆ ಕಾರಣಗಳೇನು? ಮೊದಲಾದ ಪ್ರಶ್ನೆಗಳಿಗೆ ಮೊದಲು ಆತ ತನ್ನ *ಥಿಯರಿ* (ಸಿದ್ಧಾಂತ)ಯಲ್ಲಿ ಆನಂತರ 1939ರಲ್ಲಿ ಪ್ರಕಟವಾದ ಅವಿಸ್ಮರಣೀಯ ಬಿಜಿನೆಸ್ ಸೈಕಲ್ಸ್: ಎ ಥಿಯರಿಟಿಕಲ್, ಹಿಸ್ಟಾರಿಕಲ್ ಅಂಡ್ ಸ್ಟ್ಯಾಟಿಸ್ಟಿಕಲ್ ಅನಾಲಿಸಿಸ್ ಆಪ್ ದಿ ಕ್ಯಾಪಿಟಲಿಸ್ಟ್ ಪ್ರೊಸೆಸ್ ತಮ್ಮ ಕೃತಿಗಳಲ್ಲಿ ಉತ್ತರಿಸಿದ್ದಾರೆ. ಈ ಕೃತಿಗಳಲ್ಲಿ ಶುಂಪೀಟರ್ ರವರು ಆರ್ಥಿಕ ಕ್ಷೇತ್ರದಲ್ಲಿ ಬಂಡವಾಳಶಾಹಿಯ ಅಂತರ್ಗತ ಚೈತನ್ಯದ ಮುಖ್ಯ ಮೂಲವನ್ನು ಕುರಿತು ಪ್ರಸ್ತಾಪಿಸಿದ್ದಾರಲ್ಲದೆ, ಅರ್ಥವ್ಯವಸ್ಥೆಯಲ್ಲಿ ಕಂಡುಬರುವ ಬದಲಾವಣೆಯು ಇತರ ಕ್ಷೇತ್ರಗಳಿಗೆ ಹರಡುತ್ತದೆ ಮತ್ತು ಅದರ ಮೇಲೆ ಪ್ರತಿಫಲಿಸುತ್ತದೆ ಎಂದಿದ್ದಾರೆ. ಮುಖ್ಯವಾಗಿ ಇಲ್ಲಿ ಅರ್ಥ ಮಾಡಿಕೊಳ್ಳಬೇಕಾಗಿರುವುದೇನೆಂದರೆ, ವಿವಿಧ ಕ್ಷೇತ್ರಗಳ ಪರಸ್ಪರ ಅವಲಂಬನೆ ಮತ್ತು ಅವುಗಳ ಸಹವಿಕಾಸ. ಆದ್ದರಿಂದ ಶುಂಪೀಟರ್‌ರವರು ತಮ್ಮ ಆರ್ಥಿಕ ವಿಶ್ಲೇಷಣೆಯನ್ನು ಆಧುನಿಕ ರಾಜಕೀಯ ವ್ಯವಸ್ಥೆಯಾದ ಪ್ರಜಾಪ್ರಭುತ್ವದ ಸಿದ್ಧಾಂತ ಮತ್ತು ಬಂಡವಾಳಶಾಹಿಯ ದೀರ್ಘಾವಧಿಯ ಪ್ರವೃತ್ತಿಯೊಂದಿಗೆ 1942 ರಲ್ಲಿ ಪ್ರಕಟವಾದ ತಮ್ಮ ಕ್ಯಾಪಿಟಲಿಸಂ, ಸೋಷಿಯಲಿಸಂ ಅಂಡ್ ಡೆಮಾಕ್ರಸಿ ' ಎಂಬ ಕೃತಿಯಲ್ಲಿ ಪೂರಕಗೊಳಿಸಿದ್ದಾರೆ. ಮಾರ್ಕ್ಸ್ ಹೊರತುಪಡಿಸಿ ಹಿಂದಿನ ಎಲ್ಲ ಅರ್ಥಶಾಸ್ತ್ರಜ್ಞರು ಬಂಡವಾಳಶಾಹಿಯ ಪ್ರಮುಖ ಲಕ್ಷಣವಾದ ಅದರ ಕ್ರಿಯಾಶೀಲತೆಯನ್ನು ನಿರ್ಲಕ್ಷಿಸಿದ್ದಾರೆ ಎಂದು ಆರೋಪಿಸಿರುವ ಶುಂಪೀಟ್‌ರವರು ಸಾಂಪ್ರದಾಯಿಕ ಅರ್ಥಶಾಸ್ತ್ರದಿಂದ ಸ್ವೀಕರಿಸಲ್ಪಟ್ಟ ಸ್ಥಿರ ಮಾದರಿಗಳು ಸಮತೋಲನದ ಪರಿಕಲ್ಪನೆಯ ಸುತ್ತ ಸುತ್ತುತ್ತವೆಯೇ ಹೊರತು ಈ ವೈಶಿಷ್ಟ್ಯವನ್ನು ಕಂಡುಹಿಡಿಯುವಲ್ಲಿ ವಿಫಲವಾಗಿವೆ ಎಂದಿದ್ದಾರೆ. ಅವರ ದೃಷ್ಟಿಯಲ್ಲಿ "ಅಭಿವೃದ್ಧಿ ಮತ್ತು ಸಮತೋಲನವು ಪರಸ್ಪರ ಪ್ರತ್ಯೇಕವಾಗಿವೆ".

ಸೃಜನಶೀಲ ವಿನಾಶ (**Creative Destruction**)

ಅಭಿಜಾತ ಅರ್ಥಶಾಸ್ತ್ರದಲ್ಲಿ ಮತ್ತು ಮಾರ್ಕ್ಸ್ರ ವಿಚಾರಗಳಲ್ಲಿ ಕ್ರಿಯಾಶೀಲತೆಯ ಮೂಲವು ಹೆಚ್ಚು ವ್ಯವಸ್ಥಿತವಾಗಿದೆ. ಮಾರ್ಕ್ಸ್ರ ಮಾತಿನಲ್ಲಿ ಹೇಳುವುದಾದರೆ, "ಸ್ಪರ್ಧೆಯ ನಿರ್ಬಂಧದ ಕಾನೂನು" ವ್ಯವಸ್ಥಿತವಾದ ಅಭಿವೃದ್ಧಿಗೆ ಚಾಲನೆ ನೀಡುತ್ತದೆ. ಆರ್ಥಿಕ ಸ್ಪರ್ಧೆ ಅಂದರೆ ಪೈಪೋಟಿ. ಆ ಪೈಪೋಟಿಯಲ್ಲಿ ಸೃಜನಶಿಲತೆಯನ್ನು ಅಳವಡಿಸಿಕೊಂಡವರು ಅಥವಾ ಕನಿಷ್ಠ ಅನುಕರಿಸುವವರು ಮಾತ್ರ ಮಾರುಕಟ್ಟೆಯಲ್ಲಿ ಯಶಸ್ವಿಯಾಗಿ ಬದುಕುಳಿಯುತ್ತಾರೆ. ಆರ್ಥಿಕವಾಗಿ ಉಪಯುಕ್ತವಾದ ಹೊಸ ಜ್ಞಾನವು -, ಹೊಸ ಸರಕುಗಳು, ಹೊಸ ಉತ್ಪಾದನಾ ವಿಧಾನಗಳು, ವ್ಯಾಪಾರದ ಹೊಸ ಸಂಸ್ಥೆಗಳು - ಪದೇಪದೇ ಹಳೆಯ ಜ್ಞಾನದ ಶತ್ರುವಾಗಿದೆ, ಅಂದರೆ ಜ್ಞಾನವು

ಯಾವಾಗಲೂ ಸಂಚಿತವಾಗಿರುವುದಿಲ್ಲ. ಈ ಪ್ರಕ್ರಿಯೆಯು "ಸೃಜನಶೀಲ ವಿನಾಶ"ದಲ್ಲಿ ಒಂದಾಗಿದೆ. ಶುಂಪೀಟರ್‌ರವರ ಪ್ರಸಿದ್ಧವಾದ ಸೃಜನಶೀಲ ವಿನಾಶ ಎಂಬ ಪದವು ಅಭಿವೃದ್ಧಿಯ ಇಬ್ಬಂದಿತನದ Janus-faced ಸ್ವಭಾವವನ್ನು ವಿವರಿಸುತ್ತದೆ. ತಾಂತ್ರಿಕ ಬದಲಾವಣೆಯು ಸಂಪೂರ್ಣ ಆರ್ಥಿಕ ವ್ಯವಸ್ಥೆಯನ್ನು ನಿರಂತರವಾಗಿ ಕ್ರಾಂತಿಕಾರಿಯಾಗಿಸುತ್ತದೆ. ಅಂದರೆ ತಾಂತ್ರಿಕ ಪ್ರಗತಿಯಿಂದಾಗಿ ಅರ್ಥವ್ಯವಸ್ಥೆಯು ಬದಲಾವಣೆಗೆ ಒಳಪಡುತ್ತದೆ, ಇದು ಹೊಸ ಸರಕುಗಳು, ಹೊಸ ಸಂಸ್ಥೆಗಳು ಮತ್ತು ಹೊಸ ವೃತ್ತಿಗಳನ್ನು ಅಸ್ತಿತ್ವಕ್ಕೆ ತರುತ್ತದೆ ಹಾಗೂ ಹಳೆಯದನ್ನು ಸೇವೆಯಿಂದ ಹೊರ ಹಾಕುತ್ತದೆ. ಈ ಪ್ರಕ್ರಿಯೆಯನ್ನು ಶುಂಪೀಟರ್‌ರವರು ಸೃಜನಶೀಲ ವಿನಾಶ ಎಂದು ಕರೆದಿದ್ದಾರೆ. ಇದು ಸಮಾಜದ ಮೇಲೆ ಗಾಢವಾದ ಬದಲಾವಣೆಗಳನ್ನು ಉಂಟು ಮಾಡುವುದರ ಜೊತೆಗೆ ಸೋತವರು ಗೆದ್ದವರು ಇಬ್ಬರನ್ನೂ ಒಳಗೊಂಡಿರುತ್ತದೆ. ಸಾಮರಸ್ಯದ ಪ್ರಗತಿ ಅದರ ವ್ಯವಹಾರವಲ್ಲ.

ಶುಂಪೀಟರ್‌ರವರ ಪ್ರಕಾರ ಈ ಕ್ರಿಯಾಶೀಲತೆಯ ಮೂಲ 'ವಾಣಿಜ್ಯೋದ್ಯಮಿ'ಯ ಕ್ರಿಯಾತ್ಮಕ ನಡೆಯಾಗಿದೆ. ಇವರು ವಾಲ್ರಾಸಿಯನ್ ಸಿದ್ಧಾಂತದ ಸಾಧನೆಗಳನ್ನು ಪಾಲಿಸಿದರೂ ಕೂಡ, ಅದು ಚಾಲ್ತಿಯಲ್ಲಿರುವ ಸಂದರ್ಭಗಳಿಗೆ ಅನುಗುಣವಾಗಿರುವ "ಸ್ಥಿರ", "ಸಮೃದ್ಧಿ/ಹೆಡೋನಿಕ್" ಮತ್ತು "ತರ್ಕಬದ್ಧ" ಪ್ರಕಾರಗಳನ್ನು ಮಾತ್ರ ಒಳಗೊಂಡಿದೆ ಎಂದು ಅವರು ಆಕ್ಷೇಪಿಸಿದ್ದಾರೆ. ಈ ದೃಷ್ಟಿಕೋನದಲ್ಲಿ ಪ್ರತಿನಿಧಿಗಳು ಚಾಲ್ತಿಯಲ್ಲಿರುವ ಪರಿಸ್ಥಿತಿಗಳಿಗೆ ಸಾಧ್ಯವಾದಷ್ಟು ಉತ್ತಮವಾಗಿ ಹೊಂದಿಕೊಳ್ಳಲು ಕಾಳಜಿ ವಹಿಸುತ್ತಾರೆ ಮತ್ತು ನಿರ್ದಿಷ್ಟ ನಿರ್ಬಂಧಗಳಿಗೆ ಒಳಪಟ್ಟು ಪರಿಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳುತ್ತಾರೆ. ಇವರು, ಶುಂಪೀಟರ್ ಪ್ರಕಾರ "ನೀರಸ ಸಮತೋಲನ ಪುರುಷ"ರಾಗಿದ್ದಾರೆ. ಅವರ ಪ್ರಕಾರ ಸಾಂಪ್ರದಾಯಿಕ ಅರ್ಥಶಾಸ್ತ್ರದಿಂದ ಸಂಪೂರ್ಣವಾಗಿ ಕಡೆಗಣಿಸಲ್ಪಟ್ಟಿರುವ ವಿಭಿನ್ನ ರೀತಿಯ ಪ್ರತಿನಿಧಿ, ಕ್ರಿಯಾತ್ಮಕ ಮತ್ತು ಶಕ್ತಿಯುತ ಪ್ರತಿನಿಧಿ ಅಥವಾ ಉದ್ಯಮಿಯು ಸೃಜನಶೀಲ ಪ್ರತಿಕ್ರಿಯೆಯನ್ನು ಹೊಂದಿರುತ್ತಾನೆ. ಅವನು ಸಂದರ್ಭಗಳನ್ನು ಕಂಡುಕೊಂಡಂತೆ ಸ್ವೀಕರಿಸುವುದಿಲ್ಲ ಮತ್ತು ನಿರ್ದಿಷ್ಟ ಷರತ್ತುಗಳೊಂದಿಗೆ ತನ್ನನ್ನು ತಾನು ಹೊಂದಿಸಿಕೊಳ್ಳುವುದಿಲ್ಲ. ಇದಕ್ಕೆ ಬದಲಾಗಿ ಅವನು ಸಂದರ್ಭಗಳನ್ನು ಜಯಿಸಲು, ಅಡೆತಡೆಗಳನ್ನು ಎದುರಿಸಲು ಮತ್ತು ಆರ್ಥಿಕ ಚಟುವಟಿಕೆಗೆ ಹೊಸ ಆಯಾಮಗಳನ್ನು ಸೇರಿಸುವ ಉದ್ದೇಶವನ್ನು ಹೊಂದಿರುತ್ತಾನೆ. ಆದರೆ ಎಲ್ಲ ಉದ್ಯಮಿಗಳು ಹೀಗೆ ಮಾಡಲು ಸಮರ್ಥರಾಗಿರುವುದಿಲ್ಲ. ಅಗತ್ಯವಿರುವ ಕಲ್ಪನೆ, ಇಚ್ಛಾಶಕ್ತಿ ಮತ್ತು ಅಪಾಯದ ಸಹಿಷ್ಣುತೆಯನ್ನು ಹೊಂದಿರುವ ಆರ್ಥಿಕ ಜಗತ್ತಿನ - 'ಗಣ್ಯರು', 'ಪ್ರಮುಖರು'- ಸಮರ್ಥ ಉದ್ಯಮಿಗಳು ಮಾತ್ರ ಇಂತಹ ಆವಿಷ್ಕಾರಗಳಿಗೆ ಕೈ ಹಾಕುತ್ತಾರೆ, ಶುಂಪೀಟರ್ ಇಂತಹ ಉದ್ಯಮ

ಸಂಚಾಲಕರನ್ನು 'ಸಮಾಜದ ಆರ್ಥಿಕ ಮುಂದಾಳು' ಎಂದು ಕರೆದಿದ್ದಾರೆ, ಏಕೆಂದರೆ ಅವರ ದೃಷ್ಟಿಯಲ್ಲಿ ಅವರು ಸಮಾಜದ ಆದಾಯ ಗಳಿಕೆಯಲ್ಲಿ ತೊಡಗಿರುತ್ತಾರೆ ಮತ್ತು ಅರ್ಥವ್ಯವಸ್ಥೆಯನ್ನು ಮುನ್ನಡೆಸುತ್ತಾರೆ. ಆದರೆ ಶುಂಪೀಟರ್‌ರವರು ಇವರ ಕೆಲವು ಕರಾಳ ಮುಖಗಳನ್ನು ಸಹ ಗುರುತಿಸಿದ್ದಾರೆ. "ಅಂತಹವರು ಆವಿಷ್ಕಾರ ಮಾಡುತ್ತಾರೆ, ಅವರಿಗೆ ಅದನ್ನು ಮಾಡದೆ ಇರಲು ಸಾಧ್ಯವಿಲ್ಲ" ಏಕೆಂದರೆ ಅವರು ಸಮಾಜದಲ್ಲಿ ಉನ್ನತ ಸ್ಥಾನವನ್ನು ಬಯಸುತ್ತಾರೆ ಮತ್ತು ಇತರರ ಮೇಲೆ ಜಯ ಸಾಧಿಸಲು ಇಚ್ಛಿಸುತ್ತಾರೆ. ಕೆಲವು ಉದ್ಯಮಿಗಳ ನಡವಳಿಕೆಯನ್ನು ವಿವರಿಸಲು "ಅರ್ಧ-ರೋಗಶಾಸ್ತ್ರದ ಕ್ಷಣಗಳನ್ನು" half-pathological ಹೇಗೆ ಸೇರಿಸಬೇಕು ಎಂಬುದನ್ನು ಶುಂಪೀಟರ್ ಸೂಚಿಸಿದರು. ಕೆಲವು ಉದ್ಯಮಿಗಳು ಕಾರ್ಯವ್ಯಸನಿಗಳಾಗಿದ್ದು ದೈನಂದಿನ ಜೀವನದಲ್ಲಿ ಮನರಂಜನೆ, ಸಂತೋಷಕ್ಕಾಗಿ ಸಮಯವನ್ನೇ ನೀಡದವರಾಗಿರುತ್ತಾರೆ. ಹೀಗಿದ್ದರೂ, ಸೃಜನಶೀಲ ವಿನಾಶದ ನಾಟಕದಲ್ಲಿ ಉದ್ಯಮಿಗಳು ಪ್ರಮುಖ ಆಟಗಾರರಾಗಿದ್ದಾರೆ ಮತ್ತು ಬಂಡವಾಳಶಾಹಿಯನ್ನು ಅರ್ಥಮಾಡಿಕೊಳ್ಳಲು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಇವರ ಪಾತ್ರವನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ ಎಂಬ ಅಭಿಪ್ರಾಯವನ್ನು ಶುಂಪೀಟರ್‌ರವರು ವ್ಯಕ್ತಪಡಿಸಿದ್ದಾರೆ.

ಆವಿಷ್ಕಾರ, ನಾವೀನ್ಯತೆ, ಅನುಕರಣೆ (**Invention, Innovation, Imitation**)

ಶುಂಪೀಟರ್‌ರವರು ಆವಿಷ್ಕಾರ, ನಾವೀನ್ಯತೆ ಮತ್ತು ಅನುಕರಣೆಗಳ ನಡುವಿನ ಬಿನ್ನತೆಯನ್ನು ಗುರುತಿಸಿದ್ದು, ಆವಿಷ್ಕಾರಗಳು, ಮಾರುಕಟ್ಟೆಯ ಪರೀಕ್ಷೆಯಲ್ಲಿ ಬದುಕುಳಿಯದಿದ್ದರೆ ಮತ್ತು ಆರ್ಥಿಕ ಮೌಲ್ಯವನ್ನು ಪಡೆಯದಿದ್ದರೆ ಅವು ಆರ್ಥಿಕವಾಗಿ ಅಪ್ರಸ್ತುತವಾಗುತ್ತವೆ ಮತ್ತು ನಾವೀನ್ಯತೆಗಳಾಗಿ ಬದಲಾಗುತ್ತವಷ್ಟೇ ಎಂದು ಒತ್ತಿ ಹೇಳಿದ್ದಾರೆ. ಹೊಸ ಜ್ಞಾನವನ್ನು ಪ್ರತಿನಿಧಿಸುವ ಎಲ್ಲವೂ ಆರ್ಥಿಕವಾಗಿ ಮೌಲ್ಯಯುತವಾಗಿರುವುದಿಲ್ಲ. ಸಾಮಾನ್ಯವಾಗಿ ವಾಣಿಜ್ಯೋದ್ಯಮಿಯು ಆವಿಷ್ಕಾರಕನಾಗಿರುವುದಿಲ್ಲ, ಆದರೆ ಆವಿಷ್ಕಾರಗಳಲ್ಲಿ ಅತ್ಯುತ್ತಮವಾದುದ್ದನ್ನು ಆಯ್ಕೆ ಮಾಡುವವನಾಗಿದ್ದು, ಮಾರಾಟವನ್ನು ಹೆಚ್ಚು ಲಾಭದಾಯಕವನ್ನಾಗಿ ಮಾಡುವ ಪ್ರತಿಭೆಯನ್ನು ಹೊಂದಿರುವವನಾಗಿರುತ್ತಾನೆ.. ಆವಿಷ್ಕಾರ ಮಾಡುವವರು ಸಾಮಾನ್ಯವಾಗಿ ಈ ಸಾಮರ್ಥ್ಯವನ್ನು ಹೊಂದಿರುವುದಿಲ್ಲ, ಏಕೆಂದರೆ ಅವರು ತಮ್ಮ ಗಮನವನ್ನು ಆರ್ಥಿಕ ಅಂಶಗಳ ಬದಲಾಗಿ ತಾಂತ್ರಿಕ ಅಂಶಗಳ ಮೇಲೆ ಕೇಂದ್ರೀಕರಿಸಿರುತ್ತಾರೆ.

ನಾವೀನ್ಯತೆಗಳು ಅಸಹಜವಾಗಿ ಹೆಚ್ಚಿನ ಲಾಭವನ್ನು ನೀಡಬಹುದಾಗಿದ್ದರೂ ಅವುಗಳ ಅಗತ್ಯವಿಲ್ಲ. ಏಕೆಂದರೆ ಅವು ಈ ಕೆಲಸವನ್ನು ಮಾಡಿದರೂ ಕೂಡ ಅವುಗಳು ತಾತ್ಕಾಲಿಕ. "ಅವು ಅಭಿವೃದ್ಧಿಯ ಶಿಶು ಮತ್ತು ಬಲಿಪಶು ಎರಡೂ ಆಗಿರುತ್ತವೆ" ಎಂಬುದನ್ನು ಹೊಸ ಆರ್ಥಿಕ ಜ್ಞಾನದ ವಿಶಿಷ್ಟ ಪ್ರಸರಣ ಪ್ರಕ್ರಿಯೆಯು ವಿವರಿಸುತ್ತದೆ. ಆವಿಷ್ಕಾರವು ನಾವೀನ್ಯತೆಯಾದಾಗ, "ನಾಟಕದ ಮೊದಲಂಕ

ಈ ಅನುವಾದಕರಿಗೆ ಕೇವಲ ಅರ್ಥಶಾಸ್ತ್ರ ಗೊತ್ತೇ ಹೊರತು ಸಾಹಿತ್ಯ ಗೊತ್ತಿಲ್ಲ! ಅಲಂಕಾರಗಳಾದ ಉಪಮೆ, ರೂಪಕಗಳನ್ನು ಶಬ್ದಶಃ ಅನುವಾದ ಮಾಡುತ್ತಾರೆ!

" ತೆರೆದುಕೊಳ್ಳುವುದರೊಂದಿಗೆ ಆರ್ಥಿಕ ವ್ಯವಸ್ಥೆಯಲ್ಲಿ ಅದರ ಪರಿಚಯವಾಗುತ್ತದೆ. ವಸ್ತುಗಳ ಉತ್ಪಾದನೆ ಮತ್ತು ಮಾರಾಟದಲ್ಲಿ "ಸ್ಥಗಿತಗೊಂಡ" ಹಳೆಯ ವ್ಯವಸ್ಥೆಯನ್ನು ಮುರಿಯುವ, ಹೊಸ ಆರ್ಥಿಕ ಅವಕಾಶಗಳನ್ನು ತೆರೆಯುವ ಮತ್ತು ತನ್ನ ಅನುಯಾಯಿಗಳಿಗೆ ದಾರಿ ಮಾಡಿಕೊಡುವ ಬದಲಾವಣೆಯ ಪ್ರತಿನಿಧಿ ಅಥವಾ ಉದ್ಯಮಿಯು ಯಶಸ್ವಿ ವಾಣಿಜ್ಯೋದ್ಯಮಿ ಎನಿಸಿಕೊಳ್ಳುತ್ತಾನೆ. ಇದರ ಪ್ರವರ್ತಕ ಮೊದಲು ಹೆಚ್ಚಿನ ಲಾಭವನ್ನು "ಏಕಸ್ವಾಮ್ಯ ಲಾಭ"ವನ್ನು ಬಾಚಿಕೊಳ್ಳಬಹುದು. ಹೆಚ್ಚಿನ ಲಾಭದಾಯಕತೆಯು ಪ್ರವರ್ತಕ ಉದ್ಯಮಕ್ಕೆ ತನ್ನ ಪ್ರತಿಸ್ಪರ್ಧಿಗಳಿಗಿಂತ ವೇಗವಾಗಿ ಬೆಳೆಯಲು ಅನುವು ಮಾಡಿಕೊಡುತ್ತದೆ. ಉದ್ಯಮ ಸಂಸ್ಥೆಗಳ ವಿಭಿನ್ನ ಬೆಳವಣಿಗೆಯ ದರಗಳ ಮೂಲಕ ಹೊಸ ಜ್ಞಾನವು ಹೊಸ ಸರಕುಗಳಲ್ಲಿ ಸಾಕಾರಗೊಳ್ಳುತ್ತದೆ, ಪರಿಣಾಮವಾಗಿ ಹೊಸ ಉತ್ಪಾದನಾ ವಿಧಾನಗಳು ಹಳೆಯದಕ್ಕೆ ಹೋಲಿಸಿದರೆ ಹೆಚ್ಚು ಲಾಭದಾಯಕವಾಗಿ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತವೆ.

ಆದರೆ ಪ್ರಸರಣ ಪ್ರಕ್ರಿಯೆಯು "ನಾಟಕದ ಎರಡನೇ ಅಂಕ" ದಲ್ಲಿ ಮಾತ್ರ ಗಣನೀಯವಾಗಿ ವೇಗ ಪಡೆದುಕೊಳ್ಳುತ್ತದೆ. ಇದು ಎರಡು ಹಂತಗಳನ್ನು ಹೊಂದಿರುತ್ತದೆ. ಮೊದಲ ಹಂತದಲ್ಲಿ, ಹೊಸ ಆವಿಷ್ಕಾರದ ಉಪಯೋಗದಿಂದ ಯಶಸ್ಸನ್ನು ಗಳಿಸಿದ ಮೊದಲ ಉದ್ಯಮಶೀಲರ "ಪ್ರಲೋಭನೆಗೊಳಿಸುವ ಲಾಭದ ಪ್ರಚೋದ ನೆಯನ್ನು" ಅನುಸರಿಸುವ ಸಂಸ್ಥೆಗಳು ನಾವೀನ್ಯತೆಯನ್ನು ಅನುಕರಿಸಲು ಮತ್ತು ಅವರ ಹೊಸ ಸಾಧನವನ್ನು ನಕಲಿಸಲು ಪ್ರಯತ್ನಿಸುತ್ತವೆ. ಇದು ಪರಿಗಣನೆಯಲ್ಲಿರುವ ಸರಕುಗಳ ಉತ್ಪಾದನೆಯ ಮಟ್ಟದಲ್ಲಿ ಹೆಚ್ಚಳಕ್ಕೆ ಕಾರಣವಾಗುತ್ತದೆ ಮತ್ತು ಅದನ್ನು ಉತ್ಪಾದಿಸುವ ಸಂಸ್ಥೆಗಳ ನಡುವಿನ ಸ್ಪರ್ಧೆಯ ತೀವ್ರತೆಯನ್ನು ಹೆಚ್ಚಿಸುತ್ತದೆ. ಯುನಿಟ್ ವೆಚ್ಚದಲ್ಲಿ ಕಡಿತವನ್ನು ಅನುಮತಿಸುವ ಹೊಸ ಉತ್ಪಾದನಾ ವಿಧಾನದ ಉದಾಹರಣೆಯಲ್ಲಿ, ಶೀಘ್ರದಲ್ಲಿ ಅಥವಾ ನಂತರದಲ್ಲಿ ಉತ್ಪನ್ನದ ಬೆಲೆಯನ್ನು ಕಡಿಮೆ ಉತ್ಪಾದನಾ

ವೆಚ್ಚದಡಿಯಲ್ಲಿ ನಿರ್ಧರಿಸಲಾಗುತ್ತದೆ. ಅಂದರೆ ಹೊಸ ವಿಧಾನದ ಅಳವಡಿಕೆಯಿಂದ ಉತ್ಪಾದನಾ ವೆಚ್ಚವು ಕಡಿಮೆಯಾಗುವುದರ ಜೊತೆಗೆ ಉತ್ಪಾದನೆಯು ಗಣನೀಯ ಪ್ರಮಾಣದಲ್ಲಿ ಅಧಿಕವಾಗುತ್ತದೆ. ಆಗ ಉತ್ಪನ್ನದ ಬೆಲೆಯನ್ನು ತಕ್ಷಣವೇ ನಿರ್ಧರಿಸಿ ಮಾರಾಟವನ್ನು ಹೆಚ್ಚಿಸಲಾಗುತ್ತದೆ ಮತ್ತು ಗರಿಷ್ಠ ಲಾಭವನ್ನು ಗಳಿಸಲಾಗುತ್ತದೆ. ಇದು ಎರಡನೇ ಹಂತವನ್ನು ಪ್ರಾರಂಭಿಸುತ್ತದೆ, ಏಕೆಂದರೆ ಈಗ ನಾವೀನ್ಯತೆಯನ್ನು ಹೊಂದಿದ ಉದ್ಯಮ ಸಂಸ್ಥೆಗಳೊಂದಿಗೆ ಸ್ಪರ್ಧೆ ಮಾಡಲಾಗದ ಎಲ್ಲಾ ಸ್ಥಿರ ಉದ್ಯಮ ಸಂಸ್ಥೆಗಳು ತೊಂದರೆಗೆ ಸಿಲುಕುತ್ತ್ತವೆ. ಇಲ್ಲಿಯವರೆಗೆ ತುಲನಾತ್ಮಕವಾಗಿ ಕಡಿಮೆ ಲಾಭದೊಂದಿಗೆ ಉತ್ಪಾದಿಸುತ್ತಿದ್ದ ಅವುಗಳು ನಷ್ಟವನ್ನು ಅನುಭವಿಸಬೇಕಾಗುತ್ತದೆ. " ಸರ್ವನಾಶದ ಭಯ"ದಲ್ಲಿರುವ ಅವುಗಳು ಒತ್ತಾಯಪೂರ್ವಕವಾಗಿ ತಮ್ಮ ಉತ್ಪಾದನಾ ತಂತ್ರಗಳು ಮತ್ತು ದೈನಂದಿನ  ಕಾರ್ಯವೈಖರಿಗಳನ್ನು ಆಧುನೀಕರಿಸಿಕೊಳ್ಳಬೇಕಾಗುತ್ತದೆ. ವಿಸ್ತಾರ ಹೊಂದುತ್ತಿರುವ ಸಂಸ್ಥೆಗಳ ಸಮೂಹವು ಅನುಕರಣೆ ಮಾಡುವ ಮೂಲಕ  ಅಳಿವಿನಿಂದ ಹೊರಬರುವ ಪ್ರಯತ್ನ ಮಾಡುತ್ತದೆ. ಅಂದರೆ ನಷ್ಟಕ್ಕೆ ಗುರಿಯಾಗಿರುವ ಉದ್ಯಮ ಸಂಸ್ಥೆಗಳು ತಮ್ಮ ಅಸ್ಥಿತ್ವವನ್ನು ಆವಿಷ್ಕಾರಪೂರಿತ ಉದ್ಯಮ ಸಂಸ್ಥೆಯನ್ನು ಅನುಕರಿಸುವುದರ ಮೂಲಕ ಉಳಿಸಿಕೊಳ್ಳಲು ಪ್ರಯತ್ತಿಸುತ್ತವೆ. ಆದರೆ ಎಲ್ಲರೂ ಯಶಸ್ವಿಯಾಗುವುದಿಲ್ಲ. ಅಲ್ಲಿಗೆ, ನಾಟಕವು "ಚಲಿಸುವ ಹೊಸ ಚಕ್ರಗಳಡಿ ಹೊಸಕಿ ಹೋದವರ ಕೂಗು"ವಿನೊಂದಿಗೆ ಪ್ರತಿಧ್ವನಿಸುತ್ತದೆ.

ಹೊಸ ಪ್ರಸರಣ ಮತ್ತು ಸಾಮಾನ್ಯೀಕರಣದೊಂದಿಗೆ, ಪ್ರತಿಸ್ಪರ್ಧಿಗಳು ಕ್ರಮೇಣ ಪ್ರವರ್ತಕ ಸಂಸ್ಥೆಯೊಂದಿಗೆ ಸೇರಿಕೊಳ್ಳುತ್ತಾರೆ ಮತ್ತು ಅದರ ಏಕಸ್ವಾಮ್ಯ ಸ್ಥಾನವನ್ನು ದುರ್ಬಲಗೊಳಿಸುತ್ತಾರೆ. ಇದರ ಪರಿಣಾಮವಾಗಿ, "ಉದ್ಯಮಿಯ ಲಾಭಗಳು ಮತ್ತು ಅವನ ಉದ್ಯಮಶೀಲತೆಯ ಕಾರ್ಯಗಳು ಅವನ ನೆರಳಿನಲ್ಲೇ ಇರುವ ಸ್ಪರ್ಧಿಗಳ ಸುಳಿಯಲ್ಲಿ ನಾಶವಾಗುತ್ತವೆ". ಆ ವ್ಯವಸ್ಥೆಯು ಹೊಸ "ವೃತ್ತಾಕಾರದ ಹರಿವು" ಇದರ ನಿರ್ದೇಶನದಂತೆ ಆರ್ಥಿಕತೆಯ ಸ್ಥಾಯಿ ಸ್ಥಿತಿಗೆ ತಲುಪುತ್ತದೆ, ಇಂತಹ ಸ್ಥಿತಿಯಲ್ಲಿ "ವೆಚ್ಚದ ನಿಯಮವು" ಮರುಸ್ಥಾಪಿಸಲ್ಪಡುತ್ತದೆ ಮತ್ತು ಸರಕುಗಳ ಬೆಲೆಗಳು ಮತ್ತೆ  ಅವರ ಉತ್ಪಾದನಾ ವೆಚ್ಚಗಳಿಗೆ ಸಮವಾಗುತ್ತವೆ. ನಾವೀನ್ಯತೆಗಳಿಂದ ಉಂಟಾದ ಉತ್ಪಾದಕತೆಯ ಹೆಚ್ಚಳದ ಕಾರಣದಿಂದಾಗಿ ಬಹುಪಾಲು ಜನಸಾಮಾನ್ಯರ ಆದಾಯವು ಹಳೆಯ ಸ್ಥಿತಿಗಿಂತ ಹೆಚ್ಚು ಉತ್ತಮಗೊಳ್ಳುತ್ತದೆ. ಇದು ನಾವು ಆಡಂ ಸ್ಮಿತ್‌ರವರ ಸಿದ್ಧಾಂತದಲ್ಲಿ ನೋಡಿದ ಸ್ವ-ಹಿತಾಸಕ್ತಿ ವರ್ತನೆಯ ಅನಪೇಕ್ಷಿತ ಪರಿಣಾಮಗಳ ಶುಂಪೀಟರ್‌ನ ಆವೃತ್ತಿಯಾಗಿದೆ. ಸ್ವ-ಹಿತಾಸಕ್ತಿಯ ವರ್ತನೆ  ಮತ್ತು  ಸಾಧನೆಯ

ಅವಶ್ಯಕತೆಯ ಕೆಲವು ಕಾರಣಗಳು ಅನೇಕರ ಸಂಪತ್ತಿನ ಗಳಿಕೆಯ ಬಗ್ಗೆ ಅವರ ಬೆನ್ನಿನ ಹಿಂದೆ ಮಾತನಾಡುವಂತೆ ಮಾಡುತ್ತವೆ.

ಈ ಪ್ರಕ್ರಿಯೆಯು "ವಿಕಸನೀಯ"ವಾಗಿದ್ದು ಅದಕ್ಕೆ ಅಂತ್ಯವಿಲ್ಲ ಎಂದು ಹೇಳಿರುವ ಶುಂಪೀಟರ್‌ರವರು ಅಕ್ಕಪಕ್ಕದಲ್ಲಿ ಹೊಸ ಶತ್ರುಗಳು ಈಗಾಗಲೇ ಸುಪ್ತವಾಗಿದ್ದು, ಅವರು ಶೀಘ್ರದಲ್ಲೇ ಹಿಂದಿನ ಆವಿಷ್ಕಾರವನ್ನು ಮೀರಿಸುವುದಕ್ಕಾಗಿ ಕಾಯುತ್ತಿರುತ್ತಾರೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಆರ್ಥಿಕ ಅಭಿವೃದ್ಧಿಯ ದೀರ್ಘ ಅಲೆಗಳು (**Long Waves of Economic Development)**

ಶುಂಪೀಟರ್ ಪ್ರಕಾರ, ಪ್ರಕ್ರಿಯೆಯು ನಿರಂತರ ಮತ್ತು ಆವರ್ತಕವಾಗಿದೆ. ಬಿಜಿನೆಸ್ ಸೈಕಲ್ಸ್ ನಲ್ಲಿ ಓದಿದಂತೆ, "ವ್ಯಾಪಾರ ಚಕ್ರಗಳು ಟಾನ್ಸಿಲ್‌ಗಳಂತೆ ಸ್ವತಃ ಚಿಕಿತ್ಸೆಗೆ ಒಳಪಡುವ ಪ್ರತ್ಯೇಕಿಸಬಹುದಾದ ವಸ್ತುಗಳಲ್ಲ,ಆದರೆ ಅವುಗಳನ್ನು ಪ್ರದರ್ಶಿಸುವ ಜೀವಿಯ ಹೃದಯದ ಬಡಿತದಂತಿರುತ್ತವೆ". ವ್ಯಾಪಾರವು ಆವರ್ತ ಮುಕ್ತ ಬಂಡವಾಳಶಾಹಿಯನ್ನು ಹೊಂದಲು ಸಾಧ್ಯವಿದೆ ಎಂಬ ಕಲ್ಪನೆಯನ್ನು ರಾಬರ್ಟ್ ಲ್ಯೂಕಾಸ್ (1937) ನಿಂದ ಮಾಜಿ ಫೆಡರಲ್ ರಿಸರ್ವ್ ಬ್ಯಾಂಕ್ ಅಧ್ಯಕ್ಷ ಬೆನ್ ಬರ್ನಾಂಕೆ (1953) ವರೆಗಿನ ಅರ್ಥಶಾಸ್ತ್ರಜ್ಞರು ಇತ್ತೀಚೆಗೆ ಪ್ರತಿಪಾದಿಸಿದ್ದನ್ನು ಶುಂಪೀಟರ್‌ರವರು ಅದನ್ನು ಅಪನಂಬಿಕೆ ಮತ್ತು ವಿನೋದದಿಂದ ಸ್ವೀಕರಿಸಿದ್ದಾರೆಂದು ಸುರಕ್ಷಿತವಾಗಿ ಊಹಿಸಬಹುದು. ವಾಸ್ತವಿಕ ಬೆಳವಣಿಗೆಗಳು ಯಾವುದೇ ಸಂದರ್ಭದಲ್ಲಿ, ಈ ದೃಷ್ಟಿಕೋನದ ನಿಷ್ಕಪಟತೆಯ ಮೇಲೆ ಕಟುವಾದ ದೃಷ್ಟಿ ಹರಿಸುತ್ತವೆ. ಉದಾಹರಣೆಗೆ, "ಬೃಹತ್ ಆಧುನಿಕತೆ"ಯ ಬಗ್ಗೆ ಮಾತನಾಡುವುದನ್ನು ನೆನಪಿಸಿಕೊಳ್ಳಿ, ಅಂದರೆ ವ್ಯಾಪಾರ ಚಕ್ರಕ್ಕೆ ಆರೋಪಿಸಿರುವ ಅವನತಿ, ಅನಂತರ ಅದನ್ನು ಇತ್ತೀಚಿನ ವರ್ಷಗಳಲ್ಲಿ "ಬೃಹತ್ ಹಿಂಜರಿತ" ಎಂದು ಕರೆಯಲಾಗಿದೆ.

ಶುಂಪೀಟರ್ ತನ್ನ ಹಿರಿಯ ಸ್ನೇಹಿತರೂ ಮತ್ತು ಸಹೋದ್ಯೋಗಿ ಆಗಿದ್ದ ಆರ್ಥರ್ ಸ್ಪೀಥಾಫ್ ಅವರೊಂದಿಗೆ ಒಪ್ಪಂದ ಮಾಡಿಕೊಂಡರು, ಅವರ ಪ್ರಕಾರ ಪ್ರತಿ ಹಂತದಲ್ಲಿ ವ್ಯಾಪಾರ ಚಕ್ರವು ಬಲವಾದ ಪ್ರೋತ್ಸಾಹಕವನ್ನು ನೀಡುತ್ತದೆ: ಅದು ಉತ್ಕರ್ಷದ ಕಾಲದಲ್ಲಿ "ಲಾಭದ ಕೆಂಪು ಮೂಲಂಗಿಯಾಗಿ" ಮತ್ತು ಕುಸಿತದ ಸಂದರ್ಭದಲ್ಲಿ " ಭಯದ ಕೋಲಾಗಿ" ಇರುತ್ತದೆ. ಅಂದರೆ ಉತ್ಕರ್ಷವು ಗರಿಷ್ಠ ಮಟ್ಟದ ಲಾಭವನ್ನು ಮತ್ತು ಕುಸಿತವು ಆರ್ಥಿಕ ಬಿಕ್ಕಟ್ಟನ್ನು ಸೂಚಿಸುತ್ತವೆ.

ತಾತ್ತ್ವಿಕವಾಗಿ, ನಾವೀನ್ಯತೆಯಿಲ್ಲದೆ ಯಾವುದೇ ಉತ್ಕರ್ಷವಿಲ್ಲ ಮತ್ತು ಅದರ ಸಾಮರ್ಥ್ಯವನ್ನು ಖಾಲಿ ಮಾಡದೆ ಕುಸಿತವಿಲ್ಲ ಎಂಬುದನ್ನು ಶುಂಪೀಟರ್‌ರವರು ಮನವರಿಕೆ ಮಾಡಿಕೊಟ್ಟರು. ಬಿಕ್ಕಟ್ಟು ಮತ್ತು ವ್ಯಾಪಾರ ಚಕ್ರಗಳ ಯಾವುದೇ ಸಂಪೂರ್ಣ ವಿತ್ತೀಯ ವಿವರಣೆಯನ್ನು ಪ್ರಾರಂಭದಿಂದಲೂ ತಪ್ಪುದಾರಿಗೆಳೆಯಲಾಗಿದೆ ಎಂಬುದನ್ನು ಶುಂಪೀಟರ್‌ರವರು ಪರಿಗಣಿಸಿದ್ದಾರೆ. ಇದು ಬ್ಯಾಂಕುಗಳು ಮತ್ತು ಅವುಗಳ ಸುಲಭ ಹಣದ ನೀತಿಯ ಮೇಲೆ ಆರೋಪವನ್ನು ಹೊರಿಸುತ್ತದೆ, ಉದಾಹರಣೆಗೆ, ಹಯೆಕ್‌ರವರು ತಮ್ಮ ಪ್ರೈಸಸ್ ಅಂಡ್ ಪ್ರೊಡಕ್ಷನ್ (1931 ) ಎಂಬ ಗ್ರಂಥದಲ್ಲಿ ನಾವೀನ್ಯತೆಗಳು ಮತ್ತು ಸೃಜನಶೀಲ ವಿನಾಶವನ್ನು ಗಣನೆಗೆ ತೆಗೆದುಕೊಳ್ಳಬೇಡಿ ಎಂದಿರುವುದು.

ವ್ಯಾಪಾರ ಚಕ್ರದ ಸಂಶೋಧಕ ಕ್ಲೆಮೆಂಟ್ ಜುಗ್ಲರ್ (1819-1905) ಅವರ ವ್ಯಾಪಾರ ಆವರ್ತಗಳ ಪರಿಕಲ್ಪನೆಯತ್ತ ಗಮನ ಸೆಳೆದ , ಶುಂಪೀಟರ್, ಆರಂಭದಲ್ಲಿ ಸುಮಾರು ಒಂಬತ್ತರಿಂದ ಹತ್ತು ವರ್ಷಗಳ ಕಾಲ ವ್ಯಾಪಾರ ಆವರ್ತಗಳಿರಬಹುದೆಂದು ಅಂದಾಜಿಸಿದ್ದರು, ಅನಂತರ ಅವರು “ದೀರ್ಕಾಲದ ಅಲೆ” ಎಂಬ ಪರಿಕಲ್ಪನೆಯನ್ನು ಸೇರಿಸಿದರು, ಇದು ಸುಮಾರು ಐವತ್ತು ವರ್ಷಗಳವರೆಗೆ ವ್ಯಾಪಿಸಿದೆ. (ಇದನ್ನು ಜುಗ್ಲರ್ ಆವರ್ತಗಳೆಂದು ಕರೆಯಲಾಗಿದೆ. ಶುಂಪೀಟರ್ ಜುಗ್ಲರ್ ಆವರ್ತಗಳ ಸಂಭವನೀಯತೆಗೆ ಸಂಬಂಧಿಸಿದಂತೆ ವಿವರಿಸುತ್ತಾ ರಾಷ್ಟ್ರದಲ್ಲಿ ಸಂಕಷ್ಟದ ಪರಿಸ್ಥಿತಿಯು ತಲೆದೋರಿ ಬೇಡಿಕೆಯ ಪ್ರಮಾಣವು ಕಡಿಮೆಯಾಗುವುದರಿಂದ ಆರ್ಥಿಕ ಮುಗ್ಗಟ್ಟು ತಲೆದೋರುತ್ತದೆ. ಇದು ಬಂಡವಾಳಶಾಹಿ ಅರ್ಥಪ್ರಭುತ್ವದ ರಚನಾತ್ಮಕ ಸಂಕೀರ್ಣತೆ ಮತ್ತು ಅಪರಿಪೂರ್ಣತೆಯಿಂದಲೇ ಉಂಟಾಗುತ್ತದೆ. ಆದರೆ ಶುಂಪೀಟರ್ ದೃಷ್ಟಿಯಲ್ಲಿ ಆರ್ಥಿಕ ಮುಗ್ಗಟ್ಟು ಶಾಶ್ವತವಾದುದಲ್ಲ. ಈ ಹಂತವು ಕೇವಲ ಹೊಸ ಸಮಸ್ಥಿತಿಯ ಸಾಧನೆಗಾಗಿ ಆರ್ಥಿಕ ವ್ಯವಸ್ಥೆಯು ನಡೆಸುವ ಹೋರಾಟ ಮಾತ್ರ ಆಗಿರುತ್ತದೆ. ಈ ಅವಧಿಯಲ್ಲಿ ಕೆಲವೊಂದು ದಕ್ಷ, ಸಮರ್ಥ ಸಂಚಾಲಕರು ಹೊಸ ಆವಿಷ್ಕಾರಗಳನ್ನು ಅನುಷ್ಠಾನಕ್ಕೆ ತರುತ್ತಾರೆ. ಇದರಿಂದ ಆರ್ಥಿಕ ವ್ಯವಸ್ಥೆಯು ನಂತರ ಚೇತರಿಸಿಕೊಂಡು ಮತ್ತೊಂದು ಸಮೃದ್ಧಿ ಹಂತದ ವ್ಯಾಪಾರಿ ವರ್ತುಲವು ಪ್ರಾರಂಭವಾಗುತ್ತದೆ ಎಂದಿದ್ದಾರೆ. - ಅನುವಾದಕ)

1820 ರ ದಶಕದಲ್ಲಿ ಕೈಗಾರಿಕಾ ಕ್ರಾಂತಿಯ ಸಮಯದಲ್ಲಿ ವ್ಯಾಪಾರ ಚಕ್ರಗಳು ಕಾಣಿಸಿಕೊಂಡವು, ಅಂದು ಉತ್ಪಾದನಾ ವಲಯವು ಕೃಷಿಗೆ ಹೋಲಿಸಿದರೆ ಸಾಕಷ್ಟು ಪ್ರಾಮುಖ್ಯತೆಯನ್ನು ಪಡೆದುಕೊಂಡಿತ್ತು ಮತ್ತು ಬಂಡವಾಳಶಾಹಿ ಆಧಾರದ ಮೇಲೆ ಸಂಘಟಿತವಾಗಿತ್ತು. ಇದಕ್ಕೂ ಮೊದಲು ಉತ್ತಮ ಮತ್ತು ಕೆಟ್ಟ ಸುಗ್ಗಿಯ ಕೃಷಿ ಚಕ್ರಗಳು ಮಾತ್ರ ತಿಳಿದಿದ್ದವು. ಬೈಬಲ್‌ನಲ್ಲಿನ ಏಳು ಕಠಿಣ ವರ್ಷಗಳು ಮತ್ತು ಜೋಳದ ಏಳು ಉತ್ತಮ ವರ್ಷಗಳನ್ನು ಈ ಸಮಯದಲ್ಲಿ

ಸ್ಮರಿಸಿಕೊಳ್ಳಬಹುದು. ದೀರ್ಘ ಅಲೆಗಳಿಗೆ ಸಂಬಂಧಿಸಿದಂತೆ, ಶುಂಪೀಟರ್ ರಷ್ಯಾದ ಸಂಖ್ಯಾಶಾಸ್ತ್ರಜ್ಞ ನಿಕೊಲಾಯ್ ಕೊಂಡ್ರಾಟೀಫ್ (1892-1938 ) ಮತ್ತು ಸ್ಪೈಥಾಫ್ ಅವರನ್ನು ಅನುಸರಿಸಿದರು, ಅವರಿಗೆ ಲಭ್ಯವಿರುವ ಬೆಲೆಗಳು, ವೇತನಗಳು, ಬಡ್ಡಿದರಗಳು ಮತ್ತು ಇತರ ಪ್ರಮಾಣಗಳ ಅಂಕಿಅಂಶಗಳ ಆಧಾರದ ಮೇಲೆ ಅವರು ದೀರ್ಘಾವಧಿಯ ಮೇಲ್ಮುಖ ಪ್ರವೃತ್ತಿಗಳನ್ನು, ನಂತರ ಆರ್ಥಿಕ ಚಟುವಟಿಕೆಯ ಕೆಳಮುಖ ಪ್ರವೃತ್ತಿಗಳನ್ನು ವಿವರಿಸಿದ್ದಾರೆ. ಕೊಂಡ್ರಾಟೀಫ್ ನಾಮಮಾತ್ರದ ಪ್ರಮಾಣಗಳ ಮೇಲೆ ಗಮನವನ್ನು ಕೇಂದ್ರೀಕರಿಸಿದ್ದರೆ, ಶುಂಪೀಟರ್‌ರವರು ಸಂಪೂರ್ಣ ಉತ್ಪನ್ನ ಮತ್ತು ಆರ್ಥಿಕತೆಯ ನಿರ್ದಿಷ್ಟ ವಲಯಗಳ ಉತ್ಪನ್ನಗಳು, ಕಾರ್ಮಿಕ ಉದ್ಯೋಗ, ಆರ್ಥಿಕತೆಯಲ್ಲಿನ ಬಂಡವಾಳ ಸಂಗ್ರಹದಂತಹ ನೈಜ ಚಕ್ರಗಳಲ್ಲಿನ ದೀರ್ಘ ಅಲೆಗಳತ್ತ ಗಮನ ಸೆಳೆದರು. ಮೊದಲನೆಯ ಮಹಾಯುದ್ಧದ ಅವಧಿಯವರೆಗೆ, ಶುಂಪೀಟರ್ ಮೂರು ರೀತಿಯ ದೀರ್ಘಾವಧಿಯ ಅಲೆಗಳನ್ನು ಗುರುತಿಸಿದರು, ಪ್ರತಿಯೊಂದೂ ಅಲೆಯು ಸಂಪೂರ್ಣ ವ್ಯವಸ್ಥೆಯ ಮೇಲೆ ಪರಿಣಾಮ ಬೀರುವ ತಾಂತ್ರಿಕ ಪ್ರಗತಿಗಳಿಂದ ಪ್ರಚೋದಿಸಲ್ಪಟ್ಟಿತು, ನಂತರ ಇದನ್ನು “ಮೂಲ ನಾವೀನ್ಯತೆಗಳು” ಎಂದು ಕರೆಯಲಾಯಿತು: ಕೊಂಡ್ರಾಟೀಫ್ ಎಂದು ಕರೆಯಲ್ಪಡುವ ಮೊದಲ ಅಲೆಯು ಉಗಿ ಎಂಜಿನ್ನಿಂದ (1787-1842) ಪ್ರಚೋದಿಸಲ್ಪಟ್ಟರೆ, ಎರಡನೇ ಅಲೆಯು ರೈಲ್ವೇ ಸಾರಿಗೆಯಿಂದಲೂ (1843-1897), ಮೂರನೇ ಅಲೆಯು ವಿದ್ಯುದ್ದೀಕರಣದ ಮೂಲಕ (1897ರಿಂದ ಸುಮಾರು  1940ರವರೆಗೆ) ಕಾಣಿಸಿಕೊಂಡರೆ,  ಅನಂತರದ ನಾಲ್ಕನೇ ಕೊಂಡ್ರಾಟೀಫ್ ಅಲೆಯು ಆಟೋಮೊಬೈಲ್‌ನೊಂದಿಗೆ ಮತ್ತು ಐದನೆಯ ಅಲೆಯು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದೊಂದಿಗೆ ಸಂಬಂಧ ಹೊಂದಿದ್ದವು.

ಸಾಲ/ಉದ್ದರಿ ಮತ್ತು ಬ್ಯಾಂಕುಗಳು (**Credit and Banks)**

ಶುಂಪೀಟರ್‌ರವರ “ಆರ್ಥಿಕ ಜೀವನದ ವೃತ್ತಾಕಾರದ ಹರಿವು” ಎಂಬ ಪರಿಕಲ್ಪನೆಯಲ್ಲಿ ತಿಳಿಸಿರುವಂತೆ ಸ್ಥಾಯಿ ಆರ್ಥಿಕತೆಯಲ್ಲಿ ಒಂದೇ ರೀತಿಯ ಉತ್ಪಾದನೆ ಮತ್ತು ಅನುಭೋಗದ ಪ್ರಕ್ರಿಯೆಗಳು  ದಿನವೂ ನಡೆಯುತ್ತವೆ, ಹಣದ ಏಕೈಕ ಕಾರ್ಯವು ವಿನಿಮಯ ಮಾಧ್ಯಮ ಮಾತ್ರವಾಗಿದೆ. ಇದು ನೈಜ ಆರ್ಥಿಕತೆಯ ಮೇಲೆ ಮುಸುಕಿನಂತೆ ಇರುವುದೇ ಹೊರತು ಅದರ ಮೇಲೆ ಯಾವುದೇ ಪ್ರಭಾವ ಬೀರುವುದಿಲ್ಲ. ಆದರೆ ಕ್ರಿಯಾತ್ಮಕ, ನವೀನ ಆರ್ಥಿಕತೆಯಲ್ಲಿ,  ಇದು ವಿಭಿನ್ನವಾಗಿದೆ. ಹೊಸ ಸಂಯೋಜನೆಗಳನ್ನು ಕಾರ್ಯಗತಗೊಳಿಸಲು ಹಳೆಯ

ಸಂಯೋಜನೆಗಳಿಂದ ಉತ್ಪಾದನಾ ಸಂಪನ್ಮೂಲಗಳನ್ನು ಹಿಂತೆಗೆದುಕೊಳ್ಳುವ ಅಗತ್ಯವಿದೆ. ಅಧಿಕಾರದಲ್ಲಿರುವ ಸಂಸ್ಥೆಗಳಿಂದ ಬಳಸಲ್ಪಡುತ್ತಿರುವ ಸಂಪನ್ಮೂಲಗಳನ್ನು ನಾವೀನ್ಯಕಾರರಿಗೆ ರವಾನಿಸಲಾಗುತ್ತದೆ. ಆದರೆ ನಾವೀನ್ಯಕಾರರು ಸಾಮಾನ್ಯವಾಗಿ ಯಾವುದೇ ಕಾರಣವಿಲ್ಲದೆ ಈ ಸಂಪನ್ಮೂಲಗಳನ್ನು ಬಳಸಲು ಸಾಧ್ಯವಿಲ್ಲ. ಏಕೆಂದರೆ ಅವರು ಇದಕ್ಕಾಗಿ ಬ್ಯಾಂಕ್ ಸಾಲವನ್ನು ಅವಲಂಬಿಸಬೇಕಾಗುತ್ತದೆ. (ಶುಂಪೀಟರ್ ವಾಸ್ತವವಾಗಿ ಸಾಹಸೋದ್ಯಮ ಬಂಡವಾಳ ಸೇರಿದಂತೆ ಹಣಕಾಸು ಹೂಡಿಕೆಯ ಇತರ ರೂಪಗಳನ್ನು ಚರ್ಚಿಸಿದ್ದಾರೆ, ಆದರೆ ಅವರು ಬ್ಯಾಂಕ್ ಸಾಲಕ್ಕೆ ಹೆಚ್ಚು ಒತ್ತು ನೀಡಿದ್ದಾರೆ.) ಹೀಗಾಗಿ ನಾವೀನ್ಯಕಾರರು ತಮ್ಮ ಉದ್ಯಮಕ್ಕೆ ಅಗತ್ಯವಿರುವ ಬಂಡವಾಳವನ್ನು ಬ್ಯಾಂಕುಗಳಿಂದ ಸಾಲವಾಗಿ ಪಡೆಯುತ್ತಾರೆ. ಉದ್ದೇಶಿತ ಯೋಜನೆಯ ಲಾಭದಾಯಕತೆಯ ಬಗ್ಗೆ ಸೂಕ್ತ ರೀತಿಯ ತೀರ್ಮಾನ ಕೈಗೊಳ್ಳಲು ನಾವೀನ್ಯತೆಗೆ ಹಣವನ್ನು ಒದಗಿಸುವ ಬ್ಯಾಂಕುಗಳ ಹಿತದೃಷ್ಟಿಯಿಂದ ಇದು ಉತ್ತಮವಾಗಿದೆ. ಇದು ಸಂಪೂರ್ಣ ಪರಿಣತಿಯನ್ನು ಮತ್ತು ಬ್ಯಾಂಕುಗಳ ಕಡೆಯಿಂದ ದೀರ್ಘಾವಧಿಯ ದೃಷ್ಟಿಕೋನವನ್ನು ಬಯಸುತ್ತದೆ, ಏಕೆಂದರೆ ಹೊಸತನವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ಮತ್ತು  ಮಾರಾಟ ಮಾಡಲು ಬಹಳ ಸಮಯ ತೆಗೆದುಕೊಳ್ಳುತ್ತದೆ.

ಉದ್ದರಿ ಎನ್ನುವುದು ಹೊಸತನದ ಪರವಾಗಿ ಸಂಪನ್ಮೂಲಗಳ ಹಿಂತೆಗೆದುಕೊಳ್ಳುವಿಕೆಯ ಪ್ರಮುಖ ಅಂಶವಾಗಿದೆ. ಎಲ್ಲಾ ಉತ್ಪಾದನಾ ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳುವ ಆರ್ಥಿಕತೆಯಲ್ಲಿ, ವಿತ್ತೀಯ ಪರಿಭಾಷೆಯಲ್ಲಿ ಒಟ್ಟಾರೆ ಬೇಡಿಕೆಯ ಹೆಚ್ಚಳವು ಉತ್ಪಾದಕ ಸಂಪನ್ಮೂಲಗಳ ಬೆಲೆಗಳ ಹೆಚ್ಚಳಕ್ಕೆ ಕಾರಣವಾಗುತ್ತದೆ. ಉದ್ದರಿಯ ವಿಸ್ತರಣೆಯಿಂದ ಉಂಟಾಗುವ ಹಣದುಬ್ಬರವನ್ನು ಸ್ಥಿರ ಸಂಸ್ಥೆಗಳ ಮೇಲಿನ ತೆರಿಗೆಯೊಂದಿಗೆ ಹೋಲಿಸಬಹುದು ಮತ್ತು ಅಗತ್ಯ ಮಾರ್ಗಗಳ ಮೂಲಕ ಉದ್ಯಮಿಗಳ ಕೈಗೆ ಸಂಪನ್ಮೂಲಗಳು ದೊರೆಯುತ್ತವೆ. ಶುಂಪೀಟರ್ ಪ್ರಕಾರ ಈಗ ಮಾತ್ರ "ಬಂಡವಾಳ", "ಲಾಭ" ಮತ್ತು "ಬಡ್ಡಿ" ಎಂಬುವು ರಂಗವನ್ನು ಪ್ರವೇಶಿಸುತ್ತವೆ. ಬಂಡವಾಳವು ಆವಿಷ್ಕರಿಸುವವರಿಗೆ/ನವೋದ್ಯಮಿಗಳಿಗೆ ಪ್ರತ್ಯೇಕವಾಗಿ ಕೊಳ್ಳುವ ಶಕ್ತಿಯನ್ನು ಹಸ್ತಾಂತರಿಸುವುದನ್ನು ಒಳಗೊಂಡಿದೆ. ಇದು ಸ್ವತಃ ಉತ್ಪಾದಕವಲ್ಲ, ಆದರೆ ಉತ್ಪಾದಕತೆಯನ್ನು ಹೆಚ್ಚಿಸಲು ಅಗತ್ಯವಿರುವ ಪೂರ್ವಸಿದ್ಧತೆ ಮಾಡಿಕೊಳ್ಳಲು ನೆರವಾಗುತ್ತದೆ. ಸ್ವೀಕರಿಸಿದ ಸಿದ್ಧಾಂತ ವಾದಿಸಿದಂತೆ ಉತ್ಪಾದಿಸಿದ ಉತ್ಪಾದನಾ ಸಾಧನಗಳು ಅಥವಾ ಸಂಗ್ರಹವಾದ ಉಳಿತಾಯಗಳು ಬಂಡವಾಳವಲ್ಲ. ಬದಲಿಗೆ, ಬಂಡವಾಳವನ್ನು ಹೊಸ ಉತ್ಪಾದಕರಿಗೆ ನೀಡಲಾಗುತ್ತದೆ. ಆದ್ದರಿಂದ ಶುಂಪೀಟರ್ ತಮ್ಮ "ಬಂಡವಾಳದ ಕೊಳ್ಳುವ ಶಕ್ತಿ ಸಿದ್ಧಾಂತ"ದ ಬಗ್ಗೆ ಮಾತನಾಡಿದ್ದಾರೆ. ಅಭಿವೃದ್ಧಿಯ ಪ್ರಕ್ರಿಯೆಯು ಟೇಕ್ ಆಫ್ ಆಗಲು, ಯಾವುದೇ

ಪೂರ್ವ ಉಳಿತಾಯದ ಅಗತ್ಯವಿಲ್ಲ ಎಂದು ಹೇಳಿದ ಅವರು ಆವಿಷ್ಕಾರಕನಿಗೆ ಉದ್ದರಿ ನೀಡಿದರೆ ಸಾಕು. ಆಗ ಆವಿಷ್ಕಾರಗಳ ಪರಿಣಾಮವಾಗಿ ಮಾತ್ರ ಉಳಿತಾಯವು ಪಡೆದುಕೊಂಡ ಲಾಭ ಮತ್ತು ಇತರ ರೀತಿಯ ಆದಾಯದ ಹೆಚ್ಚಳದಿಂದ ಉಂಟಾಗುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. (ಅಂದರೆ ಕಡ್ಡಾಯ ಉಳಿತಾಯಗಳು ಬಂಡವಾಳ ಸಂಚಯನದ ಪ್ರಮುಖ ಮೂಲವಾಗಿ ಉದ್ಯಮಕ್ಕೆ ನಿಧಿಗಳನ್ನೊದಗಿಸುತ್ತವೆ ಎಂದು ಶುಂಪೀಟರ್‌ರವರು ಭಾವಿಸಿದ್ದಾರೆ. ಬ್ಯಾಂಕುಗಳ ಸಾಲ (ಉದ್ದರಿ) ರೂಪದ ಸಂಪನ್ಮೂಲಗಳಿಂದ ಹೂಡಿಕೆಯ ಹೆಚ್ಚಳದೊಡನೆ ಬಂಡವಾಳ ಸರಕುಗಳಿಗೆ ಬೇಡಿಕೆ ಹೆಚ್ಚಾಗುತ್ತದೆ. ಇದರಿಂದ ಅನುಭೋಗಿ ಸರಕುಗಳಿಗೆ ಬದಲಾಗಿ ಬಂಡವಾಳ ಸರಕುಗಳ ಉತ್ಪಾದನೆ ಹೆಚ್ಚುತ್ತದೆ. ಪರಿಣಾಮವಾಗಿ ಆರ್ಥಿಕತೆಯಲ್ಲಿ ಕಡ್ಡಾಯ ಉಳಿತಾಯಗಳು ಬೆಳೆಯುತ್ತವೆ.-ಅನುವಾದಕ)

ಶುಂಪೀಟರ್‌ರವರು ಹಣ ಅಥವಾ ಉದ್ದರಿ ಮಾರುಕಟ್ಟೆಯನ್ನು “ಬಂಡವಾಳಶಾಹಿ ಆರ್ಥಿಕತೆಯ ಪ್ರಧಾನ ಕಛೇರಿ” ಎಂದು ಕರೆದರು. ಅವರ ದೃಷ್ಟಿಯಲ್ಲಿ ಬಡ್ಡಿಯು ಲಾಭದ ಕಡಿತವಾಗಿದೆ ಮತ್ತು ಅದನ್ನು ದ್ರವ್ಯತೆಯ ಪೂರೈಕೆಗಾಗಿ ಪಾವತಿಸಲಾಗುತ್ತದೆ. ಬಂಡವಾಳ, ಲಾಭ ಮತ್ತು ಬಡ್ಡಿಗಳು ಕ್ರಿಯಾತ್ಮಕ ಆರ್ಥಿಕತೆಯಲ್ಲಿ ಮಾತ್ರ ಅಸ್ತಿತ್ವದಲ್ಲಿವೆಯೇ ಹೊರತು ವೃತ್ತಾಕಾರದ ಹರಿವಿನಲ್ಲಿ ಅಲ್ಲ. ಈ ದೃಷ್ಟಿಕೋನದಿಂದ ಶುಂಪೀಟರ್‌ರವರು ಮೂಲತಃ ಅಸ್ತಿತ್ವದಲ್ಲಿರುವ ಸಾಂಪ್ರದಾಯಿಕ, ಮಾರ್ಕ್ಸವಾದಿ, ಸೀಮಾಂತವಾದಿ/ನಿಯೋಕ್ಲಾಸಿಕಲ್, ಆಸ್ಟ್ರೀಯನ್ ಸಿದ್ಧಾಂತಗಳಿಗೆ ಸವಾಲು ಹಾಕಿದರು. ಅಂದರೆ ಈ ಸಿದ್ಧಾಂತಗಳಲ್ಲಿನ ಲೋಪದೋಷಗಳನ್ನು ಎತ್ತಿ ತೋರಿಸಿದರು.

ಶುಂಪೀಟರ್‌ರವರು ಒಂದು ಕಡೆ ಆರ್ಥಿಕತೆಯಲ್ಲಿ ಲಭ್ಯವಿರುವ ಸರಕುಗಳ ಪ್ರಮಾಣ ಮತ್ತು ಗುಣಮಟ್ಟವನ್ನು ಹೆಚ್ಚಿಸುವ ಆವಿಷ್ಕಾರಗಳನ್ನು ಕೈಗೊಳ್ಳಲು ಅಗತ್ಯವಿರುವ ಹೆಚ್ಚುವರಿ ದ್ರವ್ಯತೆ ಒದಗಿಸುವ ಬ್ಯಾಂಕಿಂಗ್ ವ್ಯವಸ್ಥೆಯನ್ನು ನೋಡಿದರೆ, ಮತ್ತೊಂದೆಡೆ, ಬ್ಯಾಂಕಿಂಗ್ ವ್ಯವಸ್ಥೆಯು ಸಟ್ಟಾವ್ಯಾಪಾರದ ನೀರ್ಗುಳ್ಳೆಗಳನ್ನು ಹೆಚ್ಚಿಸುವ ಮತ್ತು ಉತ್ತೇಜನ ನೀಡುವ ಉದ್ದೇಶವನ್ನು ಹೊಂದಿರುವುದನ್ನು ಅವರು ಗಮನಿಸಿದರು. ಗುಳ್ಳೆಗಳು ಒಡೆದ ನಂತರ ಆರ್ಥಿಕ ಬಿಕ್ಕಟ್ಟು ಆಳಗೊಳ್ಳುತ್ತದೆ ಮತ್ತು ವಿಸ್ತಾರವಾಗುತ್ತದೆ. ಇದು ಆರ್ಥಿಕ ವ್ಯವಸ್ಥೆಯಲ್ಲಿ ಹೊಸ ಸಂಯೋಜನೆಯನ್ನು ಹೀರಿಕೊಳ್ಳುವುದನ್ನು ಅನುಸರಿಸುತ್ತದೆ, ಆದ್ದರಿಂದ ಶುಂಪೀಟರ್‌ರವರು ಆಡಮ್ ಸ್ಮಿತ್ ಮತ್ತು ಅವರಿಗಿಂತ ಮುಂಚಿನ ಅನೇಕ ಇತರ ಅರ್ಥಶಾಸ್ತ್ರಜ್ಞರಂತೆ ಬ್ಯಾಂಕಿಂಗ್ ವಲಯದ ನ್ಯಾಯಯುತ ನಿಯಂತ್ರಣಕ್ಕೆ ಕರೆ ನೀಡಿದರು.

**ಶುಂಪೀಟರ್ ಪರಂಪರೆ (SCHUMPETER'S LEGACY)**

ಶುಂಪೀಟರ್‌ರವರ ವಿಚಾರಗಳು ಹಲವು ಸಮಾಜ ವಿಜ್ಞಾನದ ಫಲವತ್ತಾದ ಕ್ಷೇತ್ರಗಳ ನೆಲದಲ್ಲಿ ಬೇರೂರಿವೆ. ಅವುಗಳನ್ನು ವ್ಯವಹಾರಿಕ ಅರ್ಥಶಾಸ್ತ್ರದಲ್ಲಿ ಮತ್ತು ವಿಶೇಷವಾಗಿ ಉದ್ಯಮಶೀಲತೆಯ ಮೇಲಿನ ನಿರ್ವಹಣಾ ಸಾಹಿತ್ಯದಲ್ಲಿ ತೆಗೆದುಕೊಳ್ಳಲಾಗಿದೆ. "ವಿಕಸನೀಯ ಅರ್ಥಶಾಸ್ತ್ರ"ದ ಸ್ಥಾಪಕ ಪಿತಾಮಹರಲ್ಲಿ ಶುಂಪೀಟರ್‌ರವರು ಕೂಡ ಒಬ್ಬರೆಂದು ಪರಿಗಣಿಸಲ್ಪಟ್ಟಿದ್ದಾರೆ, ಇದರಲ್ಲಿ ಆರ್ಥಿಕ ಅಭಿವೃದ್ಧಿಯನ್ನು ಆಯ್ಕೆಯ ಪ್ರಕ್ರಿಯೆ ಎಂದು ಅರ್ಥೈಸಲಾಗುತ್ತದೆ, ಅದರ ಸೃಜನಶೀಲ ಭಾಗವು ವೈವಿಧ್ಯತೆಯನ್ನು ಹೆಚ್ಚಿಸುತ್ತದೆ, ಆದರೆ ಅದರ ವಿನಾಶಕಾರಿ ಭಾಗವು ಅದನ್ನು ಕಡಿಮೆ ಮಾಡುತ್ತದೆ. ಆದರೆ ಈ ರೀತಿಯ ಸಮಸ್ಯೆಯು ನಾವೀನ್ಯತೆಯ ಪ್ರಕ್ರಿಯೆಯ ಸಂಕೀರ್ಣತೆ ಮತ್ತು ಅದರ ಪ್ರಮುಖ ಲಕ್ಷಣಗಳನ್ನು ಸೆರೆಹಿಡಿಯಲು ಉತ್ತಮ ಮಾರ್ಗವಾಗಿದೆ. ಈ ಅಂಶವನ್ನು ನಾವು ರಿಚರ್ಡ್ ನೆಲ್ಸನ್ ಮತ್ತು ಸಿಡ್ನಿ ವಿಂಟರ್‌ರವರ ಎವಲ್ಯೂಷನರಿ ಥಿಯರಿ ಆಫ್ ಎಕನಾಮಿಕ್ ಚೇಂಜ್ (An Evolutionary Theory of Economic Change 1982) ಮತ್ತು ಸ್ಟಾನ್ಲಿ ಮೆಟ್‌ಕಾಲ್ಫ್‌ರವರ ಎವಲ್ಯೂಷನರಿ ಎಕನಾಮಿಕ್ಸ್ ಅಂಡ್ ಕ್ರಿಯೇಟಿವ್ ಡಿಸ್ಟ್ರಕ್ಷನ್ (Evolutionary Economics and Creative Destruction 1998) ಎಂಬ ಆರಂಭದ ಕೃತಿಗಳಲ್ಲಿ ಗಮನಿಸಬಹುದು. ಜರ್ಮನ್ ಉಲ್ರಿಚ್ ವಿಟ್ (೧೯೪೬) ಮತ್ತು ಇಟಾಲಿಯನ್ ಗಿಯೋವನ್ನಿ ಡೋಸಿ (೧೯೫೩)ರವರು ವಿಕಸನೀಯ ಅರ್ಥಶಾಸ್ತ್ರದ ಇತರ ಪ್ರಮುಖ ಪ್ರತಿನಿಧಿಗಳಾಗಿದ್ದಾರೆ.

ಸಾಮಾನ್ಯವಾಗಿ "ಹೊಸ ಬೆಳವಣಿಗೆ ಸಿದ್ಧಾಂತ" ಎಂದು ಕರೆಯಲ್ಪಡುವ ಒಂದು ಶಾಖೆಯು ಶುಂಪೀಟರ್‌ರವರ ಕೆಲವು ವಿಚಾರಗಳನ್ನು ಹೆಚ್ಚಾಗಿ ನವ ಅಭಿಜಾತ ಪಂಥದ ಚೌಕಟ್ಟಿನೊಳಗೆ ಔಪಚಾರಿಕಗೊಳಿಸುತ್ತದೆ; ನಾವು ಈ ವಿಷಯವನ್ನು ನಿರ್ದಿಷ್ಟವಾಗಿ ಫಿಲಿಪ್ ಅಘಿಯಾನ್ (1956) ಮತ್ತು ಪೀಟರ್ ಹೊವಿಟ್ (1946) ರವರ ಎಂಡೋಜೆನಸ್ ಗ್ರೋಥ್ ಥಿಯರಿ (Endogenous Growth Theory (1998)' ಎಂಬ ಕೃತಿಯಲ್ಲಿ ನೋಡಬಹುದು. ಈ ರೀತಿಯ ಸಾಹಿತ್ಯದ ಪ್ರಮುಖ ಉದ್ದೇಶ ಆರ್ಥಿಕ ವ್ಯವಸ್ಥೆಯಿಂದ ಉತ್ಪತ್ತಿಯಾಗುವ ತಾಂತ್ರಿಕ ಪ್ರಗತಿಯನ್ನು ವಿವರಿಸುವುದಾಗಿದೆ.

ಮೂಲಭೂತ ಆವಿಷ್ಕಾರಗಳ ಪರಿಕಲ್ಪನೆಯು ತಿಮೋತಿ ಬ್ರೆಸ್ನಾಹನ್ (1953) ಮತ್ತು ಮ್ಯಾನುಯೆಲ್ ಟ್ರಾಜ್ಟೆನ್ಬರ್ಗ್ (1950) ಅವರ "ಜನರಲ್ ಪರ್ಪಸ್ ಟೆಕ್ನಾಲಜೀಸ್: ಇಂಜಿನ್ಸ್ ಆಫ್ ಗ್ರೋಥ್ (General Purpose Technologies: 'engines of growth?) "ಎಂಬ ಶೀರ್ಷಿಕೆಯ

ಲೇಖನದಲ್ಲಿ ಪುನರಾವರ್ತನೆಯಾಗಿದೆ ಎಂದು ಹೇಳಬಹುದು (1995). ಸಾಮಾನ್ಯ ಉದ್ದೇಶದ ತಂತ್ರಜ್ಞಾನಗಳು ಈ ಕೆಳಗಿನ ಮೂರು ವಿಶಿಷ್ಟ ಲಕ್ಷಣಗಳನ್ನು ಪ್ರದರ್ಶಿಸುತ್ತವೆ: (೧) ಅವು ವ್ಯಾಪಕವಾಗಿವೆ, ಅಂದರೆ, ಅವು ಆರ್ಥಿಕ ವ್ಯವಸ್ಥೆಯ ಬೃಹತ್ ಭಾಗಗಳ ಮೇಲೆ ಪರಿಣಾಮ ಬೀರುತ್ತವೆ; (೨) ಅವುಗಳು ಮತ್ತಷ್ಟು ಸುಧಾರಣೆಗಳಿಗೆ ವಿಶಾಲ ವ್ಯಾಪ್ತಿಯನ್ನು ನೀಡುತ್ತವೆ; ಮತ್ತು (೩) ಅವುಗಳು ತಂತ್ರಜ್ಞಾನವನ್ನು ಪೂರೈಸುವ ಉದ್ಯಮ ಮತ್ತು ಅವನ್ನು ಬಳಸುವವರ ನಡುವೆ ಗಣನೀಯವಾದ ನವೀನ ಪೂರಕತೆಯನ್ನು ಪ್ರದರ್ಶಿಸುತ್ತವೆ. (ಮುಂದಿನ ಮತ್ತು ಹಿಂದಿನ ಸಂಪರ್ಕಗಳು).

1970 ರ ದಶಕದಲ್ಲಿ, ಶುಂಪೀಟರ್‌ರವರ ವಿದ್ಯಾರ್ಥಿಯಾದ ಹೈಮನ್ ಮಿನ್ಸ್ಕಿ ಅವರು (1919-1996) "ಹಣಕಾಸು ಮಾರುಕಟ್ಟೆಗಳ ಅಸ್ಥಿರತೆ" ಎಂಬ ಸಿದ್ಧಾಂತವನ್ನು ಅಭಿವೃದ್ಧಿಪಡಿಸಿದರು. ಮಿನ್ಸ್ಕಿ ಅವರ ಪ್ರಕಾರ ವರ್ತುಲದ ಆರಂಭದಲ್ಲಿ, ಹೂಡಿಕೆದಾರರು ತಮ್ಮ ಗಳಿಕೆಯಿಂದ "ಹೆಡ್ಜ್ ಫೈನಾನ್ಸ್" ಕ್ರಮವನ್ನು ಅನುಸರಿಸುತ್ತಾರೆ. ಇದರಿಂದಾಗಿ ಅವರು ಬಡ್ಡಿಯನ್ನು ಮಾತ್ರವಲ್ಲದೆ ಸಾಲವನ್ನೂ ಸಹ ಮರುಪಾವಾತಿಸಬಹುದು. ಉತ್ಕರ್ಷವು ಮುಂದುವರೆದಂತೆ, ಗಂಡಾಂತರವನ್ನು ಊಹಿಸುವ ಹೂಡಿಕೆದಾರರ ಇಚ್ಛೆಯು ಬೆಳೆಯುತ್ತದೆ ಮತ್ತು ಅವರು ಸಹಜವಾಗಿ ' ನಿರಾಧಾರ/ಊಹಾತ್ಮಕ ಹಣಕಾಸು'ವಿಗೆ ಮೋರೆ ಹೋಗುತ್ತಾರೆ: ಆಗ ಅವರು ತಮ್ಮ ಹಳೆಯ ಸಾಲಗಳನ್ನು ಹೊಸ ಸಾಲಗಳೊಂದಿಗೆ ಬದಲಾಯಿಸಿಕೊಂಡು, ಬಡ್ಡಿ ಪಾವತಿಗಳನ್ನು ಸಲ್ಲಿಸುವ ಸೇವೆಯನ್ನು ಮಾತ್ರ ನೀಡಬಹುದು. ಕೊನೆಯ ಹಂತವನ್ನು "ಪೊಂಜಿ ಫೈನಾನ್ಸ್" ಎಂದು ಕರೆಯಲಾಗುತ್ತದೆ, ಇದನ್ನು ಸ್ನೋಬಾಲ್‌ನಲ್ಲಿ ಚಾರ್ಲ್ಸ್ ಪೊಂಜಿ ನಡೆಸಿದ ಮೋಸದಿಂದಾಗಿ ಹೀಗೆ ಕರೆಯಲಾಗಿದೆ.ಲಾಗಿದೆ. ಹೂಡಿಕೆದಾರರು ಅಂತಿಮವಾಗಿ ಇನ್ನೂ ಹೆಚ್ಚಿನ ಲಾಭವನ್ನು ಗಳಿಸಬಹುದು ಎಂಬ ಉತ್ಕೃಷ್ಟ ನಿರೀಕ್ಷೆಯಲ್ಲಿರುತ್ತಾರೆ, ಅವರು ಬಡ್ಡಿ ಪಾವತಿಸಲು ಸಾಲ ಪಡೆಯುತ್ತಾರೆ. ಪರಿಣಾಮವಾಗಿಅಪಾಯವು ಏರಿ ಊಹಾಪೋಹದ ಗುಳ್ಳೆ ಒಡೆದು ಅಪಾಯವು ಮಿತಿಮೀರುತ್ತದೆ.

ಶುಂಪೀಟರ್ ಸಮಾಜಶಾಸ್ತ್ರ ಮತ್ತು ರಾಜಕೀಯ ವಿಜ್ಞಾನದಿಂದ ಹೆಚ್ಚು ಪ್ರಭಾವಿಸಲ್ಪಟ್ಟಿದ್ದರು. ಸಮಾಜ ವಿಜ್ಞಾನಗಳ ಏಕತೆಯ ದೃಷ್ಟಿಕೋನವನ್ನು ವ್ಯಕ್ತಪಡಿಸುವ ಅವರ ಕ್ಯಾಪಿಟಲಿಸಂ, ಸೋಷಿಯಲಿಸಂ ಮತ್ತು ಡೆಮಾಕ್ರಸಿ (Capitalism, Socialism, and Democracy) ಕೃತಿಯು ಇನ್ನೂ ಈ ವಿಭಾಗಗಳಲ್ಲಿ ಅನೇಕ ಕೋರ್ಸ್ಗಳ ಓದುವ ಪಟ್ಟಿಯಲ್ಲಿದೆ. ಏಕಸ್ವಾಮ್ಯ ಮತ್ತು ಅಧಿಕಾರಶಾಹಿತ್ವದ ಕಡೆಗಿನ ಪ್ರವೃತ್ತಿಯಿಂದಾಗಿ, ಬಂಡವಾಳಶಾಹಿಯ ಚಲನೆಯ ನಿಯಮವು ಸಮಾಜವಾದದ ಕೆಲವು ರೂಪಗಳನ್ನು ಒಳಗೊಂಡಿರುತ್ತದೆ ಎಂಬ ಅವರ

ಮನವರಿಕೆಯನ್ನು ವ್ಯಾಪಕವಾಗಿ ಚರ್ಚಿಸಲಾಗಿದೆ. ರಾಜಕೀಯ ಪಕ್ಷಗಳು ಮತದಾರರ ಮತಗಳಿಗಾಗಿ ಸ್ಪರ್ಧಿಸುವ ಪ್ರಜಾಪ್ರಭುತ್ವಗಳಲ್ಲಿನ ರಾಜಕೀಯ ಪ್ರಕ್ರಿಯೆಯನ್ನು ಕುರಿತಾದ ಅವರ ವಿಶ್ಲೇಷಣೆಯು (ಅರ್ಥಶಾಸ್ತ್ರದಲ್ಲಿ ಹುದುಗಿರುವ ಸಾಧನಗಳು ಮತ್ತು ವಾದಗಳನ್ನು ಬಳಸುವುದು) ಪರ್ಯಾಯ ಮತದಾನ ವ್ಯವಸ್ಥೆಗಳು ಮತ್ತು ಅವುಗಳ ಪರಿಣಾಮಗಳ ಬಗ್ಗೆ ದೊಡ್ಡ ಸಾಹಿತ್ಯವನ್ನು ಹುಟ್ಟುಹಾಕಿತು.

ಈಗ ನಾವು ಶುಂಪೀಟರ್‌ರೊಂದಿಗೆ ಹೋಲಿಸಬಹುದಾದ ವಿದ್ವಾಂಸ ಮತ್ತು ಇಪ್ಪತ್ತನೇ ಶತಮಾನದ ಮೊದಲಾರ್ಧದಲ್ಲಿ ಹೆಚ್ಚು ಪ್ರಭಾವಶಾಲಿಯಾಗಿದ್ದ ಸಾರ್ವಜನಿಕ ವ್ಯಕ್ತಿಯ ಕಡೆಗೆ ನೋಡೋಣ. ಶುಂಪೀಟರ್ ಅವರ ಕಾಲದ ಅತ್ಯಂತ ಪ್ರಮುಖ ಅರ್ಥಶಾಸ್ತ್ರಜ್ಞ ಎಂಬ ಕೀರ್ತಿ ಗಳಿಸುವ ವ್ಯರ್ಥಪ್ರಯತ್ನ ಮಾಡಿದ್ದರು, ಆ ಶೀರ್ಷಿಕೆಗೆ ಪಾತ್ರನಾದ ವಿದ್ವಾಂಸನೆಂದರೆ ಜಾನ್ ಮೇನಾರ್ಡ್ ಕೇನ್ಸ್.

ಅನುವಾದ: ಡಾ. ನೇ.ತಿ.ಸೋಮಶೇಖರಯ್ಯ